ಅಸಲು ದಾವೆ ನಂಃ 38/2017 ಪಿ.ಡಬ್ಲ್ಯೂಃ1- ಬಸವರಾಜ ನಾಗರಾಜ ಇಲ್ಲೂರು

<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 08-01-2026 ರಂದು ಪ್ರಮಾಣೀಕರಿಸಲಾಯಿತು.</u>

**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಎಸ್.ವಿ.ಎನ್. ವಕೀಲರಿಂದಃ</u>**

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಶಾನೆಯಾಗಿ ಈ ಕೆಳಕಂಡಂತೆ ಗುರುತಿಸಲಾಗಿದೆ.

* ದಿನಾಂಕಃ 11-04-2021 ರ ನವೋದಯ ದಿನ ಪತ್ರಿಕೆಯನ್ನು ನಿ.ಪಿಃ 11 ಎಂದು ಗುರುತಿಸಲಾಯಿತು.
* ದಿನಾಂಕ 29-05-2019 ರ ಜಿಲ್ಲಾಧಿಕಾರಿಗಳು, ಗದಗ ರವರ ಆದೇಶದ ಧೃಡಿಕೃತ ಪ್ರತಿಯನ್ನು ನಿಪಿಃ12 ಎಂದು ಗುರುತಿಸಲಾಯಿತು.
* ಎಮ್.ಇ. ನಂಬರ್ 3554 ರ ದೃಡಿಕೃತ ಪ್ರತಿಯನ್ನು ನಿ.ಪಿ. 13 ಎಂದು ಗುರುತಿಸಲಾಯಿತು.
* ದಿನಾಂಕಃ09-01-1996 ರ ಅಂಚೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು , ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದರಿ ದಾಖಲೆಯ ರುಜುವಾತಿಗೆ ಒಳಪಟ್ಟು ಗುರುತಿಸಬೇಕು ಎಂದು ತಕರಾರು ವ್ಯಕ್ತಪಡಿಸಿದ್ದು , ಸದರಿ ತಕರಾರಿಗೆ ಒಳಪಟ್ಟು ಸದರಿ ದಾಖಲೆಯನ್ನು ನಿ.ಪಿ 14 ಎಂದು ಗುರುತಿಸಲಾಯಿತು.
* ದಿನಾಂಕಃ13-08-1994 ರ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು , ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದರಿ ದಾಖಲೆಯ ರುಜುವಾತಿಗೆ ಒಳಪಟ್ಟು ಗುರುತಿಸಬೇಕು ಎಂದು ತಕರಾರು ವ್ಯಕ್ತಪಡಿಸಿದ್ದು , ಸದರಿ ತಕರಾರಿಗೆ ಒಳಪಟ್ಟು ಸದರಿ ದಾಖಲೆಯನ್ನು ನಿ.ಪಿ 15 ಎಂದು ಗುರುತಿಸಲಾಯಿತು.

.* ದಿನಾಂಕಃ27-12-1995 ರ ಲೀಗಲ್ ನೋಟಿಸನ್ನು ನಿ.ಪಿ.16 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಮುಂದುಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ ಡಿ)
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.